# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ದಿನಾಂಕ: 19-12-2020 ರಂದು ನಡೆದ ವಾರ್ಡ್ ಸಂಖ್ಯೆ: 115 ವನ್ನಾರಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯ ನಡಾವಳಿಗಳು

ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಕಛೇರಿ ಆದೇಶದ ಸಂಖ್ಯೆ: ಬಿ12(5)ಪಿಆರ್/35/2020-21, ದಿನಾಂಕ: 21-09-2020 ರ ಆದೇಶದಂತೆ ಡಿಸೆಂಬರ್-2020 ರ ಮಾಹೆಯ ವನ್ನಾರಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ಅಗರಂ ವಾರ್ಡಿನ ಜಸ್ಮಾ ದೇವಿ ಕಲ್ಯಣ ಮಂಟಪದಲ್ಲಿ ದಿನಾಂಕ: 19-12-2020 ರಂದು ನೆಡೆಸಲಾಯಿತು.

### ಸಭೆಗೆ ಹಾಜರಿದ್ದವರ ವಿವರಗಳು

| ಸನ್ಮಾನ್ಯ ಶ್ರೀ. ಎನ್. ಎ. ಹ್ಯಾರೀಸ್ | | ಮಾನ್ಯ ಶಾಸಕರು,<br>ಶಾಂತಿನಗರ ವಿಧಾನ ಸಭಾ ಕ್ಷೇತ್ರ |
|---|---|---|
| ಕ್ರ.ಸಂ | ಅಧಿಕಾರಿಗಳ ಹೆಸರು | ಪದನಾಮ |
| 1 | ಶ್ರೀ. ಆರ್. ಶಿವಕುಮಾರ್ | ಅಧ್ಯಕ್ಷಕರು ಮತ್ತು ನೋಡಲ್ ಅಧಿಕಾರಿಗಳು |
| 2 | ಆರ್ ಮಧು | ಕಾರ್ಯಪಾಲಕ ಅಭಿಯಂತರರು,<br>ಶಾಂತಿನಗರ ವಿಭಾಗ, ಬಿಬಿಎಂಪಿ |
| 3 | ಟಿ.ಡಿ. ಮಂಜುನಾಥ | ಸಹಾಯಕ ಕಾರ್ಯಪಾಲಕ ಅಭಿಯಂತರರು,<br>ದೊಮ್ಮಲೂರು ಉಪ ವಿಭಾಗ, ಬಿಬಿಎಂಪಿ |
| 4 | ಶ್ರೀ. ಡಿ. ಮೂರ್ತಿ | ಸದಸ್ಯ ಕಾರ್ಯದರ್ಶಿ ಮತ್ತು<br>ಸಹಾಯಕ ಅಭಿಯಂತರರು ವಾರ್ಡ್ ಸಂಖ್ಯೆ: 115 |
| 5 | ಅಪ್ಪುರಾಜ್ | ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಘನತ್ಯಾಜ್ಯ ನಿರ್ವಹಣೆ-ಶಾಂತಿನಗರ ವಿಭಾಗ |
| 6 | ಆರ್. ಜಗದೀಶ್ | ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಬಿ.ಡಬ್ಲ್ಯು.ಎಸ್.ಎಸ್.ಬಿ. |
| 7 | ಕೆ. ನಾಗರಾಜ | ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಬಿ.ಡಬ್ಲ್ಯು.ಎಸ್.ಎಸ್.ಬಿ. |
| 8 | ಡಾ॥ ಶ್ರೀನಿವಾಸ್ | ಆರೋಗ್ಯ ವೈದ್ಯಾಧಿಕಾರಿಗಳು,<br>ಶಾಂತಿನಗರ ವಲಯ |
| 9 | ಟಿ.ಎಸ್. ನಾಗಪ್ಪ | ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಬೆಸ್ಕಾಂ |
| 10 | ಮಂಜುನಾಥ | ಸಹಾಯಕ ಕಾರ್ಯಪಾಲಕ ಅಭಿಯಂತರರು<br>ಇ-6, ಬೆಸ್ಕಾಂ |
| 11 | ಸಿ ನಂಜುಂಡಯ್ಯ | ಕಿರಿಯ ಅಭಿಯಂತರರು, ಬೋರ್‌ವೆಲ್ |
| 12 | ಎಂ ವಿಜಯ್‌ಕುಮಾರ್ | ಸಹಾಯಕ ಅಭಿಯಂತರರು, ಸ್ಲಂ ಬೋರ್ಡ್ |
| 13 | ಕೆ ಪುರುಷೋತ್ತಮ | ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆ |
| 14 | ಎಲ್. ಸಗಯನಾಥನ್ | ಹಿರಿಯ ಆರೋಗ್ಯ ಪರಿವೀಕ್ಷಕರು<br>ವಾರ್ಡ್ ಸಂಖ್ಯೆ: 112 |
| 15 | ಶ್ರೀನಿವಾಸ್ | Animal Husbandary |

| | | |
|---|---|---|
| 16 | ಪುರುಷೋತ್ತಮ | ಸಮಿತಿ ಸದಸ್ಯರು & ಕಿರಿಯ ಆರೋಗ್ಯ ಪರಿವೀಕ್ಷಕರುವಾರ್ಡ್ ಸಂಖ್ಯೆ: 112 |
| 17 | ಬಿ ಚಂದ್ರಶೇಖರ್ | ಸಹಾಯಕ ಅಭಿಯಂತರರು, ಬೃಹತ್ ನೀರುಗಾಲುವೆ, ಬಿಬಿಎಂಪಿ |
| 18 | ಸಂತೋಷ್ ಕುಮಾರ | AE, WMM CV-1 (BWSSB) |
| 19 | ಮಮತ. ಎಂ.ಹೆಚ್ | ಸಹಾಯಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ |
| 20 | ಶಶಿಕುಮಾರ್ | ಕೆಲಸ ಪರಿವೀಕ್ಷಕರು ವಾರ್ಡ್ ಸಂಖ್ಯೆ: 112 |
| 21 | ಗಾಯತ್ರಿ | ಟೈಲರಿಂಗ್ ಶಿಕ್ಷಕರು, ವಾರ್ಡ್ ಸಂಖ್ಯೆ: 112 ದೊಮ್ಮಲೂರು, ಬಿಬಿಎಂಪಿ |
| 22 | ದೇವರಾಜು | ಅರಣ್ಯ ಇಲಾಖೆ (ಪೂರ್ವ) |
| 23 | ಲಿಂಗರಾಜ್ ಸಿ | Asst. Drugs controller |
| 24 | ಮಂಜಪ್ಪ ಹೆಚ್. ಎಸ್. | ಸಹಾಯಕ ಅಭಿಯಂತರರು ಸ್ಟ್ರೀಟ್ ಲೈಟ್ ವಿಭಾಗ, ಬಿಬಿಎಂಪಿ |
| 25 | ಬಸವರಾಜ್ ಕುಮಾರ್ | ಪೋಲೀಸ್ ಸಬ್‌ಇನ್ಸ್‌ಪೆಕ್ಟರ್, ಹಲಸೂರು ಪೋಲೀಸ್ ಠಾಣೆ |
| 26 | ಪದ್ಮರಾಜ್ ಪೋತ್ | ಸಹಾಯಕ ಅಭಿಯಂತರರು ಯೋಜನೆ-ಪೂರ್ವ |
| **ವಾರ್ಡ್ ಸಮಿತಿ ಸಭೆಯಲ್ಲಿ ಹಾಜರಿದ್ದ ಸದಸ್ಯರುಗಳ ವಿವರ** | | |
| 27 | ಶ್ರೀಮತಿ. ಶಿವಗಾಮಿ | ವಾರ್ಡ್ ಸಮಿತಿ ಸದಸ್ಯರು |
| 28 | ಥಾಮ | ವಾರ್ಡ್ ಸಮಿತಿ ಸದಸ್ಯರು |
| 29 | ವಿ. ಆರ್. ಜಯ್ ಕುಮಾರ್ | ವಾರ್ಡ್ ಸಮಿತಿ ಸದಸ್ಯರು |
| 30 | ವಿನೋಧ್ | ವಾರ್ಡ್ ಸಮಿತಿ ಸದಸ್ಯರು |
| 31 | ಮುಸ್ತಫಾ | ವಾರ್ಡ್ ಸಮಿತಿ ಸದಸ್ಯರು |
| 32 | ಪ್ರಭಾಕರ್ | ವಾರ್ಡ್ ಸಮಿತಿ ಸದಸ್ಯರು |
| 33 | ಸುಬ್ರಮಣಿ | ವಾರ್ಡ್ ಸಮಿತಿ ಸದಸ್ಯರು (ಮಡಿವಾಳ ಮಾಚಿದೇವ ಅಸೋಸಿಯೇಷನ್) |
| 34 | ಡಾ॥ ಶೆಟ್ಟಿ | ವಾರ್ಡ್ ಸಮಿತಿ ಸದಸ್ಯರು (ಐ.ಡಿ.ಎ. ಅಸೋಸಿಯೇಷನ್) |

ದಿನಾಂಕ: 19-12-2020 ರಂದು ಮದ್ಯಾಹ್ನ 2-00 ಗಂಟೆಗೆ ಸನ್ಮಾನ್ಯ ಶ್ರೀ. ಎನ್. ಎ. ಹ್ಯಾರೀಸ್, ಮಾನ್ಯ ಶಾಸಕರು ಶಾಂತಿನಗರ ವಿಧಾನ ಸಭಾ ಕ್ಷೇತ್ರ ರವರ ಉಪಸ್ಥಿತಿಯಲ್ಲಿ ವಾರ್ಡ್ ಸಂಖ್ಯೆ: 115 ವನ್ನಾರಪೇಟೆ ವಾರ್ಡಿನ ವಾರ್ಡ್ ಸಮಿತಿ ಸಭೆಯನ್ನು ಪ್ರಾರಂಭಿಸಲಾಯಿತು.

ಶ್ರೀ. ಡಿ. ಮೂರ್ತಿ, ಕಾರ್ಯದರ್ಶಿಗಳು ಮತ್ತು ವಾರ್ಡಿನ ಸಹಾಯಕ ಅಭಿಯಂತರರು ಸಭೆಗೆ ಆಗಮಿಸಿದ್ದ ಸನ್ಮಾನ್ಯ ಶಾಸಕರನ್ನು, ವಾರ್ಡ್ ಸಮಿತಿ ಅಧ್ಯಕ್ಷರು & ನೋಡಲ್ ಅಧಿಕಾರಿಗಳನ್ನು ಮತ್ತು ವಾರ್ಡ್ ಸಮಿತಿ ಸದಸ್ಯರುಗಳನ್ನು, ವಿವಿಧ ಇಲಾಖೆಗಳ ಅಧಿಕಾರಿಗಳನ್ನು ಹಾಗೂ ವಾರ್ಡಿನ ನಿವಾಸಿಗಳನ್ನು ಸಭೆಗೆ ಸ್ವಾಗತವನ್ನು ಕೋರಿ ಸಭೆಯನ್ನು ಪ್ರಾರಂಭಿಸಿದರು.

ಸಭೆಯ ಪ್ರಾರಂಭದಲ್ಲಿ, ಕಾರ್ಯದರ್ಶಿಗಳು ಹಿಂದಿನ ಸಭೆಯ ನಡವಳಿಗಳನ್ನು ಓದಿದರು, ಮತ್ತು ಹಿಂದಿನ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳ ಬಗ್ಗೆ ಕೈಗೊಂಡಿರುವ ಕ್ರಮಗಳನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳ ಸಭೆಗೆ ವಿವರಿಸಿದರು.

**ದಿನಾಂಕ: 07-12-2020 ರ ಸಭೆಯಲ್ಲಿ ಸಾರ್ವಜನಿಕರು ತಿಳಿಸಿದ ಸಮಸ್ಯೆಗಳನ್ನು ಪರಿಹರಿಸಲು ಕೈಗೊಂಡ ಕ್ರಮಗಳ ವಿವರ:**

| ಕ್ರ.ಸಂ | ಸಮಸ್ಯೆಗಳು | ಕೈಗೊಂಡ ಕ್ರಮಗಳು |
|---|---|---|
| 1 | ವಾರ್ಡಿನಲ್ಲಿರುವ ಬೋರ್‌ವೆಲ್‌ಗಳ ಕುರಿತು ಮತ್ತು ವಾರ್ಡಿನಲ್ಲಿ ನೀರಿನ ಸಮಸ್ಯೆ. | ಸಭೆಯಲ್ಲಿ ಹಾಜರಿದ್ದ ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಬೋರ್‌ವೆಲ್ ವಿಭಾಗದ ಕಿರಿಯ ಅಭಿಯಂತರರಾದ ಶ್ರೀ. ನಂಜುಂಡಯ್ಯ ರವರು ಹಾಲಿ ವಾರ್ಡಿನಲ್ಲಿರುವ ಬೋರ್‌ವೆಲ್‌ಗಳ ಸಂಪೂರ್ಣ ವಿವರವನ್ನು (Functioning & under repair, Defunct) ಸಲ್ಲಿಸುವುದಾಗಿ ತಿಳಿಸಿದರು. |
| 2 | ಸೊನ್ನೇನಹಳ್ಳಿ ಪ್ರದೇಶದಲ್ಲಿ ಕೆಲವು ಕಡೆ ಚರಂಡಿ ಮೇಲಿನ ಸ್ಲ್ಯಾಬ್‌ಗಳು ಒಡೆದು ಹೋಗಿರುತ್ತವೆ. | ಸಮಸ್ಯೆ ಪರಿಹರಿಸಲಾಗಿರುತ್ತದೆ. |
| 3 | ವಾರ್ಡಿನಲ್ಲಿ ಕಾನೂನು ಸುವ್ಯವಸ್ಥೆ ಕಾಪಾಡುವ ಬಗ್ಗೆ. | 1. ಪೋಲೀಸ್ ಅಧಿಕಾರಿಗಳು ಸಭೆಗೆ ಹಾಜರಾಗಿ ವಿವರಣೆ ನೀಡುವುದಾಗಿ ತಿಳಿಸಿರುತ್ತಾರೆ.<br>2. ಹಳೆಯ ಪೋಲೀಸ್ ಕ್ವಾಟ್ರರ್ಸ್ ಕಟ್ಟಡ ತೆರವುಗೊಳಿಸಲು ಪೋಲೀಸ್ ಇಲಾಖೆಗೆ ಪತ್ರ ಬರೆದು ಕೋರಲಾಗಿದೆ. |
| 4 | ಸೊನ್ನೇನಹಳ್ಳಿ ಪ್ರದೇಶದಲ್ಲಿರುವ ಬಡವರಿಗೆ ಹಕ್ಕು ಪತ್ರ ವಿತರಿಸುವ ಬಗ್ಗೆ. | ಸಹಾಯಕ ಕಂದಾಯ ಅಧಿಕಾರಿಗಳು, ದೊಮ್ಮಲೂರು ರವರಿಗೆ ಸೂಕ್ತ ಕ್ರಮಕ್ಕಾಗಿ ಪತ್ರ ಬರೆಯಲಾಗಿತ್ತು, ಅದರಂತೆ ಸದರಿ ಅಧಿಕಾರಿಯವರು ಕೂಡಲೇ ಕ್ರಮವಹಿಸುವುದಾಗಿ ಇಂದಿನ ಸಭೆಯಲ್ಲಿ ಮಾಹಿತಿ ನೀಡಿದರು. |
| 5 | ಉದ್ಯಾನವನಗಳಲ್ಲಿ Lights ಗಳಿಲ್ಲದಿರುವ ಬಗ್ಗೆ ಮತ್ತು ರಾತ್ರಿ ವೇಳೆಯಲ್ಲಿ ಇಲ್ಲಿ ಕಾನೂನು ಬಾಹಿರ ಚಟುವಟಿಕೆಗಳು ನಡೆಯುತ್ತಿರುವ ಬಗ್ಗೆ. | ವಿದ್ಯುತ್ ದೀಪಗಳ ಸಮಸ್ಯೆ ಪರಿಹರಿಸುವ ಬಗ್ಗೆ ಕ್ರಮವಹಿಸಲಾಗಿರುತ್ತದೆ. ಕಾನೂನು ಬಾಹಿರ ಚಟುವಟಿಕೆಗಳ ವಿರುದ್ಧ ಪೋಲೀಸ್ ಇಲಾಖೆವತಿಯಿಂದ ಸಕ್ತ ಕ್ರಮವಹಿಸುವುದಾಗಿ ಪೋಲೀಸ್ ಅಧಿಕಾರಿಗಳು ತಿಳಿಸಿರುತ್ತಾರೆ. |
| 6 | ವಿದ್ಯುತ್ ಕಂಬಗಳಲ್ಲಿ ವೈರ್‌ಗಳು ನೇತಾಡುತ್ತಿರು ಬಗ್ಗೆ ಮತ್ತು ಹಳೆಯ ವಿದ್ಯುತ್ ಕಂಬಗಳನ್ನು ಬದಲಾಯಿಸುವ ಬಗ್ಗೆ. | ಸಮಸ್ಯೆ ಪರಿಹರಿಸಲಾಗಿರುತ್ತದೆ. |
| 7 | ಶ್ರೀ. ಸುಬ್ರಮಣಿ. ಎಸ್ ಎಂಬುವವರು ನೀಡಿದ ಪತ್ರದ ಬಗ್ಗೆ. | ಕಾವೇರಿ ನೀರಿನ ಸಮಸ್ಯೆ ಸರಿಪಡಿಸಲಾಗಿದ್ದು, ಹೊಸ ಬೋರ್‌ವೆಲ್ ಬಗ್ಗೆ ಬಿ.ಡಬ್ಲ್ಯು.ಎಸ್.ಎಸ್.ಬಿ. ಇಲಾಖೆಯ ಬೋರ್‌ವೆಲ್ ವಿಭಾಗದ ಕಿರಿಯ ಅಭಿಯಂತರರಾದ ಶ್ರೀ. ನಂಜುಂಡಯ್ಯ ರವರು ಮಾಹಿತಿ ನೀಡಿದರು. |
| 8 | ಟ್ವಿಸ್ಟೆಡ್ ವೈರ್‌ಗಳನ್ನು ಬದಲಾಯಿಸಿ ABC ಕೇಬಲ್‌ಗಳನ್ನು ಅಳವಡಿಸುವ ಕುರಿತು. | ಈ ಬಗ್ಗೆ ಕ್ರಮಕೈಗೊಳ್ಳಲು ಕಾಲಾವಕಾಶ ಬೇಕಾಗಿದ್ದು, ಆದಷ್ಟು ಬೇಗ ABC ಕೇಬಲ್‌ಗಳನ್ನು ಅಳವಡಿಸಲಾಗುವುದು ಎಂದು ಬೆಸ್ಕಾಂ ಅಧಿಕಾರಿಗಳು ತಿಳಿಸಿದರು. |

- **ಇಂದಿನ ನಡೆದ ಸಭೆಯಲ್ಲಿ ಪ್ರಮುಖವಾಗಿ ಕೆಳಕಂಡ ವಿಷಯಗಳನ್ನು ಚರ್ಚಿಸಲಾಯಿತು.**

  1. **ಡಾ|| ಎ.ಹೆಚ್. ಶೆಟ್ಟಿ ರವರು ಬಜಾರ್ ಸ್ಟ್ರೀಟ್‌ನಲ್ಲಿ ಆಗುತ್ತಿರುವ ಟ್ರಾಫಿಕ್‌ಸ್ ಸಮಸ್ಯೆಯನ್ನು ಪರಿಹರಿಸಲು ಸಲ್ಲಿಸಿರುವ ಮನವಿ.**
  2. **ಶ್ರೀ. ಪ್ರಭಾಕರ್ ರವರು ಸಲ್ಲಿಸಿರುವ ಮನವಿಗಳ ಬಗ್ಗೆ.**
     a) **ಕಲ್ಯಾಣ ಇಲಾಖೆಯ ಕಾರ್ಯಕ್ರಮಗಳ ಕುರಿತು ಸಾರ್ವಜನಿಕರಿಗೆ ಅರಿವು ಮೂಡಿಸುವ ಬಗ್ಗೆ.**
     b) **ಕಾನೂನು ಸುವ್ಯವಸ್ಥೆ ಕಾಪಾಡುವ ಬಗ್ಗೆ ಮನವಿ.**
     c) **ಶೌಚಾಲಯ ನವೀಕರಿಸಲು ಮತ್ತು ಹೊಸ ಶೌಚಾಲಯ ನಿರ್ಮಿಸಲು ಮನವಿ.**

3. ಶ್ರೀ. ಜಿ.ಎಸ್. ಅಹ್ಮದ್ ರವರು ಕೇಬಲ್ ವೈರ್‌ಗಳನ್ನು ಬದಲಾಯಿಸಲು ಸಲ್ಲಿಸಿರುವ ಮನವಿ.
4. ಶಿವಗಾಮಿ ರವರು ABC ground ನಲ್ಲಿ ಶೌಚಾಲಯ ನಿರ್ಮಿಸಲು ಸಲ್ಲಿಸಿರುವ ಮನವಿ.
5. ಡಿ. ಥಾಮಾ ರವರ ಮನವಿ
   a) ವನ್ನಾರಪೇಟೆ ಬಜಾರ್ ಸ್ಟ್ರೀಟ್‌ನಲ್ಲಿ ಬಾಗಿರುವ ವಿದ್ಯುತ್ ಕಂಭವನ್ನು ಸರಿಪಡಿಸಲು ಅಥವಾ ಬದಲಾಯಿಸಲು ಮನವಿ.
   b) ಸೊಣ್ಣೇನಹಳ್ಳಿ 1ನೇ ಮುಖ್ಯರಸ್ತೆಯಲ್ಲಿ ಮಾರಿಯಮ್ಮ ದೇವಸ್ಥಾನದ ಹಿಂಭಾಗ ಡ್ರೈನೇಜ್ ಸ್ಲ್ಯಾಬ್ ಮುರಿದುಬಿದ್ದಿದ್ದು, ಬದಲಾಯಿಸಲು ಕೋರಿರುತ್ತಾರೆ.
6. ವಿನೋದ್ ರವರು ವಾರ್ಡಿನ ನಾರ್ತ್ ಸ್ಟ್ರೀಟ್‌ನಲ್ಲಿ ಆಗಬೇಕಾಗಿರುವ ಕೆಲಸಗಳ ಮನವಿ.
   a) ನಾರ್ತ್ ಸ್ಟ್ರೀಟ್‌ನಲ್ಲಿ ಕೈಗೊಳ್ಳಬೇಕಾಗಿರುವ ಕಾಂಕ್ರೀಟ್ ರಸ್ತೆ, ಫುಟ್‌ಪಾತ್ ಮತ್ತು ಚರಂಡಿ ಕಾಮಗಾರಿಗಳ ಕುರಿತು.
   b) ನೀರು ಸರಬರಾಜು ಮಾಡುವ ಸಂಬಂಧ ಬೋರ್‌ವೆಲ್ ಕೆಲಸದ ಕುರಿತು.
   c) ಕೆ.ಎಸ್.ಆರ್.ಪಿ. ಕ್ವಾಟ್ರರ್ಸ್ ನೆಲಸಮಗೊಳಿಸುವ ಕುರಿತು.
   d) ನಾರ್ತ್ ಸ್ಟ್ರೀಟ್ ಮತ್ತು ಇತರೆ ಪ್ರದೇಶಗಳಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸುವ ಬಗ್ಗೆ.

## ವಾರ್ಡ್ ಸಮಿತಿ ಸಭೆಯ ನಡಾವಳಿಗಳು

| ಕ್ರ. ಸಂ | ಚರ್ಚಿಸಿದ ವಿಷಯಗಳು | ತೆಗೆದುಕೊಳ್ಳಬೇಕಾದ ಕ್ರಮ | ಕ್ರಮಕೈಗೊಳ್ಳಬೇಕಾ ಅಧಿಕಾರಿಗಳ ವಿವರ |
|---|---|---|---|
| 1 | ವಾರ್ಡ್ ಸಮಿತಿ ಸದಸ್ಯರಾದ ಡಾ|| ಎ.ಹೆಚ್. ಶೆಟ್ಟಿ ರವರು ಮನವಿ ಪತ್ರವನ್ನು ಸಲ್ಲಿಸಿ, ವಾರ್ಡಿನ ಬಜಾರ್ ಸ್ಟ್ರೀಟ್‌ನಲ್ಲಿ ಬಾಲ ಯೇಸು ಚರ್ಚ್‌ನಿಂದ ಇಂಡಿಯನ್ ಕಿಚನ್, ಆಸ್ಟಿನ್‌ಟೌನ್ ಬಡಾವಣೆಯ ಬಿಡಿಎ ಕಾಂಪ್ಲೆಕ್ಸ್ ಎದುರಿನ ಬಸ್ ನಿಲ್ದಾಣದ ಹತ್ತಿರ ಮತ್ತು ವಾರ್ಡಿನ ಇನ್ನಿತರೆ ಕಡೆಗಳಲ್ಲಿ ಬೀದಿ ವ್ಯಾಪರಿಗಳಿಂದ ಟ್ರಾಫಿಕ್ ಸಮಸ್ಯೆ ಸಂಭವಿಸುತ್ತಿರುತ್ತದೆ. ಇದರಿಂದ ವಾಹನ ಸವಾರರು ಈ ರಸ್ತೆಗಳಲ್ಲಿ ಸಂಚರಿಸುವುದು ದುಸ್ಥತವಾಗಿರುತ್ತದೆ ಎಂದು ತಿಳಿಸಿ ಸಮಸ್ಯೆ ಪರಿಹರಿಸುವಂತೆ ಕೋರಿರುತ್ತಾರೆ. | ಮಾನ್ಯ ಶಾಸಕರು ಮತ್ತು ನೋಡಲ್ ಅಧಿಕಾರಿಗಳು ಕೂಡಲೇ ಸಂಚಾರ ಪೋಲೀಸರಿಗೆ ಟ್ರಾಫಿಕ್ ಸಮಸ್ಯೆ ಪರಿಹರಿಸಲು ಸೂಚಿಸಿದರು. | ಪೋಲೀಸ್ ಇಲಾಖೆ (ಸಂಚಾರ) |
| 2 | a) ವಾರ್ಡ್ ಸಮಿತಿ ಸದಸ್ಯರಾದ ಶ್ರೀ ಪ್ರಭಾಕರ್ ರವರು ಮನವಿಯನ್ನು ಸಲ್ಲಿಸಿ, ಪಾಲಿಕೆಯಿಂದ ಮತ್ತು ಸರ್ಕಾರದಿಂದ ಸಾರ್ವಜನಿಕರ ಅನುಕೂಲಕ್ಕಾಗಿ ಹಲವಾರು ಯೋಜನೆಗಳನ್ನು ಕಲ್ಯಾಣ ಇಲಾಖೆಯಿಂದ ಒದಗಿಸುತ್ತಿರುತ್ತಾರೆ. ಆದರೆ ಈ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸುವ ಕಾರ್ಯನಡೆಯುತ್ತಿಲ್ಲವಾದ್ದರಿಂದ, ಎಲ್ಲಾ ಕಲ್ಯಾಣ ಕಾರ್ಯಕ್ರಮಗಳ ಪಟ್ಟಿಯನ್ನು ಸಾರ್ವಜನಿಕರ ಅನುಕೂಲಕ್ಕಾಗಿ ವಾರ್ಡ್ ಕಛೇರಿಯ ಬಳಿ ಪ್ರದರ್ಶಿಸಲು ಕೋರಿರುತ್ತಾರೆ. | ಈ ಬಗ್ಗೆ ಮಾತನಾಡಿದ ಮಾನ್ಯ ಶಾಸಕರು ಮತ್ತು ನೋಡಲ್ ಅಧಿಕಾರಿಗಳು, ಸಭೆಯಲ್ಲಿ ಹಾಜರಿದ್ದ ಪಾಲಿಕೆಯ ಪೂರ್ವ ವಲಯದ ಕಲ್ಯಾಣಾಧಿಕಾರಿಗಳು ಕೂಡಲೇ ಕ್ರಮವಹಿಸಿ ಸಾರ್ವಜನಿಕರಿಗೆ ಕಲ್ಯಾಣ ಕಾರ್ಯಕ್ರಮಗಳ ಬಗ್ಗೆ ಅರಿವು ಮೂಡಿಸುವಂತೆ ಮತ್ತು ಅರ್ಹ ಫಲನುಭವಿಗಳಿಗೆ ಸೌಲಭ್ಯಗಳನ್ನು ಒದಗಿಸುವಂತೆ ಸೂಚಿಸಿದರು. | ಕಲ್ಯಾಣಾಧಿಕಾರಿಗಳು (ಪೂರ್ವ) ಬಿ.ಬಿ.ಎಂ.ಪಿ |
| | b) ವಾರ್ಡ್ ಸಮಿತಿ ಸದಸ್ಯರಾದ ಶ್ರೀ ಪ್ರಭಾಕರ್ ರವರು ಮನವಿಯನ್ನು ಸಲ್ಲಿಸಿ ವಾರ್ಡಿನಲ್ಲಿ ಕೆಲವೊಂದು ಪ್ರದೇಶಗಳಲ್ಲಿ ಜನರು ಸೇರಿಕೊಂಡು ಸಾರ್ವಜನಿಕರಿಗೆ ತೊಂದರೆ ನೀಡುತ್ತಿರುತ್ತಾರೆ, ರಸ್ತೆಗಳಲ್ಲಿ ಅಸಭ್ಯವಾಗಿ ವರ್ತಿಸುತ್ತಿರುತ್ತಾರೆ, ರಸ್ತೆಗಳಲ್ಲಿಯೇ ಆಟವಾಡುವುದು ಇತರೆ ಚಟುವಟಿಕೆಗಳ ಮಾಡುತ್ತಿರುತ್ತಾರೆ. ವಾರ್ಡಿನಲ್ಲಿ ಕಳ್ಳತನದ ಪ್ರಕರಣಗಳು ಹೆಚ್ಚುತ್ತಿರುತ್ತವೆ. ಮಾಧಕವಸ್ತುಗಳ ಚಟಕ್ಕೆ ದಾಸರಾಗಿರುವುವರಿಂದ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುತ್ತದೆ ಎಂದು ತಿಳಿಸಿ, ಪೋಲೀಸ್ ಇಲಾಖೆ ಕ್ರಮಕೈಗೊಳ್ಳಲು ಸೂಚಿಸಲು ಕೋರಿರುತ್ತಾರೆ. | ಈ ಬಗ್ಗೆ ಮಾತನಾಡಿದ ಮಾನ್ಯ ಶಾಸಕರು ಪೋಲೀಸ್ ಅಧಿಕಾರಿಗಳಿಗೆ ಸೂಕ್ತ ಕ್ರಮಕೈಗೊಳ್ಳುವಂತೆ ನಿರ್ದೇಶಿಸಿರುತ್ತಾರೆ. | ಪೋಲೀಸ್ ಇಲಾಖೆ, ವಿವೇಕನಗರ ಪೋಲೀಸ್ ಠಾಣೆ |

| | | | |
|---|---|---|---|
| | c) ವಾರ್ಡ್ ಸಮಿತಿ ಸದಸ್ಯರಾದ ಶ್ರೀ ಪ್ರಭಾಕರ್ ರವರು ವಾರ್ಡಿನ ಅಂಬುಜಂಬಮ್ ಸ್ಲಂ ಪ್ರದೇಶದಲ್ಲಿ ಹೊಸದಾಗಿ ಶೌಚಾಲಯ ನಿರ್ಮಿಸಲು ಮತ್ತು ಸೊನ್ನೇನಹಳ್ಳಿ ಪ್ರದೇಶದಲ್ಲಿರುವ ಶೌಚಾಲಯವನ್ನು ನವೀಕರಿಸಲು ಮನವಿ ಮಾಡಿರುತ್ತಾರೆ. | ಈ ಬಗ್ಗೆ ನೋಡಲ್ ಅಧಿಕಾರಿಯವರು ಪಾಲಿಕೆಯ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳಿಗೆ ಅಗತ್ಯ ಕ್ರಮ ವಹಿಸುವಂತೆ ಸೂಚಿಸಿದರು. | ಶ್ರೀ. ಟಿ.ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು ದೊಮ್ಮಲೂರು ಉಪ ವಿಭಾಗ, ಬಿಬಿಎಂಪಿ |
| 3 | ಶ್ರೀ. ಜಿ.ಎಸ್. ಅಹ್ಮದ್ ರವರು ಮನವಿಯನ್ನು ಸಲ್ಲಿಸಿ, ವಿವೇಕನಗರ ಫರ್ದರ್ ಎಕ್ಸ್‌ಟೆನ್ಷನ್ ಪ್ರದೇಶದಲ್ಲಿ ವಿದ್ಯುತ್ ಕೇಬಲ್ ವೈರ್‌ಗಳು ನೇತಾಡುತ್ತಿದು, ಇದರಿಂದ ಈ ಪ್ರದೇಶದಲ್ಲಿ ಆಟವಾಡುವ ಮಕ್ಕಳಿಗೆ ಅಪಾಯವಿರುತ್ತದೆ ಆದ್ದರಿಂದ ಕೂಡಲೇ ಕೇಬಲ್ ಬದಲಾಯಿಸುವಂತೆ ಕೋರಿರುತ್ತಾರೆ. ಮತ್ತು ಹಳೆಯ ವಿದ್ಯುತ್ ಕೇಬಲ್‌ಗಳನ್ನು ಬದಲಾಯಿಸಿ ಎ.ಬಿ.ಸಿ. ಕೇಬಲ್ ಅಳವಡಿಸಲು ಕೋರಿರುತ್ತಾರೆ. | ಈ ಬಗ್ಗೆ ಮಾತನಾಡಿದ ಬೆಸ್ಕಾಂ ಇಲಾಖೆಯ ಅಧಿಕಾರಿಗಳು ಈಗಾಗಲೇ ನೇತಾಡುತ್ತಿದ್ದ ಎಲ್ಲಾ ಕೇಬಲ್‌ಗಳನ್ನು ತೆರವು ಮಾಡಲಾಗಿರುತ್ತದೆ ಎಂದು ತಿಳಿಸಿದರು. ಮತ್ತು ಹಳೆಯ ವಿದ್ಯುತ್ ಕೇಬಲ್‌ಗಳನ್ನು ಬದಲಾಯಿಸಿ ಎ.ಬಿ.ಸಿ. ಕೇಬಲ್ ಅಳವಡಿಸಲು ಇನ್ನೂ ಸ್ವಲ್ಪ ಕಾಲವಕಾಶ ಬೇಕೆಂದು ತಿಳಿಸಿರುತ್ತಾರೆ. | ಶ್ರೀ. ನಾಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ |
| 4 | ವಾರ್ಡ್ ಸಮಿತಿ ಸದಸ್ಯರಾದ ಶಿವಗಾಮಿ ರವರು ಮನವಿಯನ್ನು ಸಲ್ಲಿಸಿ, ವನ್ನಾರಪೇಟೆ ವಾರ್ಡಿನ ABC ground ನಲ್ಲಿ ಒಂದು ಶೌಚಾಲಯವನ್ನು ನಿರ್ಮಿಸಲು ಮನವಿ ಮಾಡಿರುತ್ತಾರೆ. | ಈ ಬಗ್ಗೆ ನೋಡಲ್ ಅಧಿಕಾರಿಯವರು ಪಾಲಿಕೆಯ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳಿಗೆ ಅಗತ್ಯ ಕ್ರಮ ವಹಿಸುವಂತೆ ಸೂಚಿಸಿದರು. | ಶ್ರೀ. ಟಿ.ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು ದೊಮ್ಮಲೂರು ಉಪ ವಿಭಾಗ, ಬಿಬಿಎಂಪಿ |
| 5 | a) ವಾರ್ಡ್ ಸಮಿತಿ ಸದಸ್ಯರಾದ ಡಿ. ಧಾಮ ರವರು ಮನವಿಯನ್ನು ಸಲ್ಲಿಸಿ ವನ್ನಾರಪೇಟೆ ಬಜಾರ್ ಸ್ಟ್ರೀಟ್ನಲ್ಲಿ ಮಲ್ಲಿಕ್ ಬಜಾರ್ ಹತ್ತಿರ ವಿದ್ಯುತ್ ಕಂಭವು ಬಾಗಿಕೊಂಡಿದ್ದು, ಯಾವುದೇ ಸಮಯದಲ್ಲಿ ಬೀಳುವ ಸಂಭವವಿರುತ್ತದೆ. ಆದ್ದರಿಂದ ಕೂಡಲೇ ತೆರವುಮಾಡಿ ಎಂದು ಕೋರಿರುತ್ತಾರೆ. | ಈ ಬಗ್ಗೆ ಮಾತನಾಡಿದ ನೋಡಲ್ ಅಧಿಕಾರಿಗಳು, ಸಭೆಯಲ್ಲಿ ಹಾಜರಿದ್ದ ಬೆಸ್ಕಾಂ ಅಧಿಕಾರಿಗಳಿಗೆ ಕೂಡಲೇ ಕ್ರಮವಹಿಸಿ ವರದಿ ಮಾಡುವಂತೆ ಸೂಚಿಸಿದರು. | ಶ್ರೀ. ನಾಗಪ್ಪ, ಸಹಾಯಕ ಕಾರ್ಯಪಾಲಕ ಅಭಿಯಂತರರು ಬೆಸ್ಕಾಂ |
| | b) ಸೊನ್ನೇನಹಳ್ಳಿ 1ನೇ ಮುಖ್ಯರಸ್ತೆಯಲ್ಲಿ ಮಾರಿಯಮ್ಮ ದೇವಸ್ಥಾನದ ಹಿಂಭಾಗ ಡ್ರೈನೇಜ್ ಸ್ಲ್ಯಾಬ್ ಮುರಿದುಬಿದ್ದಿದ್ದು, ಬದಲಾಯಿಸಲು ಕೋರಿರುತ್ತಾರೆ. | ಈ ಬಗ್ಗೆ ನೋಡಲ್ ಅಧಿಕಾರಿಯವರು ಪಾಲಿಕೆಯ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳಿಗೆ ಅಗತ್ಯ ಕ್ರಮ ವಹಿಸುವಂತೆ ಸೂಚಿಸಿದರು. | ಶ್ರೀ. ಟಿ.ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು ದೊಮ್ಮಲೂರು ಉಪ ವಿಭಾಗ, ಬಿಬಿಎಂಪಿ |
| 8 | a) ವಾರ್ಡ್ ಸಮಿತಿ ಸದಸ್ಯರಾದ ವಿನೋದ್ ರವರು ಮನವಿಯನ್ನು ಸಲ್ಲಿಸಿ ನಾರ್ತ್ ಸ್ಟ್ರೀಟ್‌ನಲ್ಲಿ ಕಾಂಕ್ರೀಟ್ ಕೆಲಸ ಸರಿಯಾಗಿ ನಡೆದಿರುವುದಿಲ್ಲ. ನಾರ್ತ್ ಸ್ಟ್ರೀಟ್ ಜಂಕ್ಷನ್ ನಿಂದ ಗ್ರೀನ್ ಮೆಡಿಕಲ್ ಜಂಕ್ಷನ್‌ವರೆಗಿನ ಕಾಂಕ್ರೀಟ್ ಕೆಲಸ ಮಾಡಲು ಕೋರಿರುತ್ತಾರೆ. ಮತ್ತು ಶ್ರೀ ಕಣ್ಣಬೀರನ್ ದೇವಸ್ಥಾನದಿಂದ ಬಜಾರ್ ಸ್ಟ್ರೀಟ್ ಜಂಕ್ಷನ್‌ವರೆಗೆ ಹಾಗೂ ನಾರ್ತ್ ಸ್ಟ್ರೀಟ್ ಜಂಕ್ಷನ್‌ನಿಂದ ಗ್ರೇಪ್ ಗಾರ್ಡನ್ ರಸ್ತೆಯ ಬಿ.ಎಂ.ಟಿ.ಸಿ. ಬಸ್ ನಿಲ್ದಾಣದ ವರೆಗಿನ ರಸ್ತೆಗಳನ್ನು ಕಾಂಕ್ರಟ್ ರಸ್ತೆಗಳನ್ನಾಗಿ ಮಾಡಲು ಕೋರಿರುತ್ತಾರೆ. ಹಾಗೂ ಮಳೆ ನೀರು ಸರಾಗವಾಗಿ ಚರಂಡಿಗೆ ಹರಿದುಹೋಗುವಂತೆ ಕ್ರಮವಹಿಸಲು ಕೋರಿರುತ್ತಾರೆ. ಹಾಗೂ ಕೆ.ಬಿ.ಎ.ಆರ್. ರಸ್ತೆಯ ಡಿಲ್ಲಿ ಸ್ವೀಟ್‌ನಿಂದ ಜಸ್ಮ ಮಂದಿರ ಜಂಕ್ಷನ್‌ವರೆಗನ ಫುಟ್‌ಪಾತ್ ಮತ್ತು ಚರಂಡಿಯನ್ನು ಪಾದಚಾರಿಗಳು ಸಂಚರಿಸಲು ಆಗದಂತೆ ತರಕಾರಿ ಮಾರಾಟಗಾರರು ಒತ್ತುವರಿ ಮಾಡಿಕೊಂಡಿರುತ್ತಾರೆ ಮತ್ತು ಅನಧಿಕೃತವಾಗಿ ವಾಹನಗಳನ್ನು ಪಾರ್ಕಿಂಗ್ ಮಾಡಿರುತ್ತಾರೆಂದು ತಿಳಿಸಿ ಈ ಸಮಸ್ಯೆಯನ್ನು ಪರಿಹರಿಸುವಂತೆ ಕೋರಿರುತ್ತಾರೆ. | ಈ ಬಗ್ಗೆ ಮಾತನಾಡಿದ ಮಾನ್ಯ ಶಾಸಕರು ಮತ್ತು ನೋಡಲ್ ಅಧಿಕಾರಿಗಳು, ಸಭೆಯಲ್ಲಿ ಹಾಜರಿದ್ದ ಪಾಲಿಕೆಯ ಇಂಜಿನಿಯರಿಂಗ್ ವಿಭಾಗದ ಅಧಿಕಾರಿಗಳಿಗೆ ಸೂಕ್ತ ಕ್ರಮಕೈಗೊಳ್ಳಲು ಕೋರಿದರು. | ಶ್ರೀ. ಟಿ.ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು ದೊಮ್ಮಲೂರು ಉಪ ವಿಭಾಗ, ಬಿಬಿಎಂಪಿ<br><br>ಪೋಲೀಸ್ ಇಲಾಖೆ ವಿವೇಕನಗರ ಪೋಲೀಸ್ ಠಾಣೆ |

| | | | |
|---|---|---|---|
| | b) ಎಬಿಸಿ ಕ್ರಾಸ್ ರೋಡ್‌ನಲ್ಲಿ ಬೋರ್‌ವೆಲ್ ಕೊರೆಸಿದ್ದು, ನಾರ್ತ್ ಸ್ಟ್ರೀಟ್ ಪ್ರದೇಶದಲ್ಲಿ ಮತ್ತೊಂದು ಬೋರ್‌ವೆಲ್ ಅವಶ್ಯಕತೆ ಇದೆ ಎಂದು ತಿಳಿಸಿರುತ್ತಾರೆ. ಮತ್ತು ಎಬಿಸಿ ಕ್ರಾಸ್ ರೋಡ್‌ನಲ್ಲಿ ಹಾಕಿರುವ ಬೋರ್‌ವೆಲ್‌ಗೆ ಮೋಟರ್ ಕೆಲಸ ಪೂರ್ಣಗೊಳಿಸಿ ನೀರು ಸರಬರಾಜು ಮಾಡುವಂತೆ ಕೋರಿರುತ್ತಾರೆ. | ನೋಡಲ್ ಅಧಿಕಾರಿಗಳು, ಬಿ.ಡಬ್ಲ್ಯು.ಎಸ್.ಎಸ್.ಬಿ. ಮತ್ತು ಪಾಲಿಕೆ ಅಧಿಕಾರಿಗಳಿಗೆ ಅಗತ್ಯ ಕ್ರಮವಹಿಸುವಂತೆ ಸೂಚಿಸಿದರು. | ಶ್ರೀ. ಶ್ರೀನಿವಾಸ್ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಡಬ್ಲ್ಯು.ಎಸ್.ಎಸ್.ಬಿ<br><br>ಶ್ರೀ ಟಿ.ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ. |
| | c) ವಾರ್ಡಿನ ಬಜಾರ್ ಸ್ಟ್ರೀಟ್‌ನಲ್ಲಿರುವ ಕೆ.ಎಸ್.ಆರ್.ಪಿ. ಪೋಲೀಸ್ ಕ್ವಾಟ್ರರ್ಸ್‌ನಲ್ಲಿ ಹಲವು ಕಾನೂನು ಬಾಹಿರ ಚಟುವಟಿಕೆಗಳ ನಡೆಯುತ್ತಿರವುದರಿಂದ ಸಿದ್ಧಾರ್ಥನಗರ ಮತ್ತು ಬಜಾರ್ ಸ್ಟ್ರೀಟ್ ಪ್ರದೇಶದ ನಿವಾಸಿಗಳು ಭಯಗೊಂಡಿರುತ್ತಾರೆ. ಆದ್ದರಿಂದ ಕಟ್ಟಡವನ್ನು ನೆಲಸಮಗೊಳಿಸಿ ಕಾಂಪೌಂಡ್ ಗೋಡೆ ನಿರ್ಮಿಸಿ ಇಲ್ಲಿ ಸಾರ್ವಜನಿಕರ ಉಪಯೋಗಕ್ಕಾಗಿ ಒಂದು ಉದ್ಯಾನವನವನ್ನು ಮಾಡಿಕೊಡುವಂತೆ ಕೋರಿರುತ್ತಾರೆ. | ಈ ಬಗ್ಗೆ ಪಾಲಿಕೆಯ ದೊಮ್ಮಲೂರು ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಅಭಿಯಂತರರು ಕೆ.ಎಸ್.ಆರ್.ಪಿ. ಪೋಲೀಸ್ ಕ್ವಾಟ್ರರ್ಸ್ ಕಟ್ಟಡವನ್ನು ತೆರವುಗೊಳಿಸಲು ಈಗಾಗಲೇ ಪತ್ರ ಬರೆದಿರುವುದಾಗಿ ತಿಳಿಸಿದರು.<br><br>ಮಾನ್ಯ ಶಾಸಕರು ಪೋಲೀಸ್ ಇಲಾಖೆಯ ಅಧಿಕಾರಿಗಳಿಗೆ ಕಾನೂನು ಸುವ್ಯವಸ್ಥೆ ಕಾಪಾಡಲು ಸೂಕ್ತ ಕ್ರಮಕೈಗೊಳ್ಳುವಂತೆ ಸೂಚಿಸಿದರು. | ಶ್ರೀ. ಟಿ.ಡಿ. ಮಂಜುನಾಥ ಸಹಾಯಕ ಕಾರ್ಯಪಾಲಕ ಅಭಿಯಂತರರು ದೊಮ್ಮಲುರು ಉಪ ವಿಭಾಗ, ಬಿಬಿಎಂಪಿ<br><br>ಪೋಲೀಸ್ ಇಲಾಖೆ ವಿವೇಕನಗರ ಪೋಲೀಸ್ ಠಾಣೆ |
| | d) ನಾರ್ತ್ ಸ್ಟ್ರೀಟ್, ಎ.ಬಿ.ಸಿ. ಕ್ರಾಸ್ ರಸ್ತೆ ಮತ್ತು ಸಿದ್ಧಾರ್ಥ ಕಾಲೋನಿ ಪ್ರದೇಶಗಳಲ್ಲಿ ಸಿ.ಸಿ. ಕ್ಯಾಮರಾ ಅಳವಡಿಸಲು ಕೋರಿರುತ್ತಾರೆ. | ಈ ಬಗ್ಗೆ ಪಾಲಿಕೆಯ ವಿದ್ಯುತ್ ವಿಭಾಗದ ಅಭಿಯಂತರರಾದ ಶ್ರೀ ಮಂಜಪ್ಪ ರವರಿಗೆ ಅಗತ್ಯ ಕ್ರಮವಹಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿರುತ್ತಾರೆ. | ಶ್ರೀ. ಮಂಜಪ್ಪ ಕಿರಿಯ ಅಭಿಯಂತರರು, ವಿದ್ಯುತ್ ವಿಭಾಗ ಬಿಬಿಎಂಪಿ |

**ಮಾನ್ಯ ವಿಶೇಷ ಆಯುಕ್ತರು (ಆಡಳಿತ), ಬಿಬಿಎಂಪಿ ರವರ ಸೂಚನೆಯ ಮೇರೆಗೆ ಈ ಕೆಳಕಂಡ ವಿಷಯಗಳನ್ನು ವಾರ್ಡ್ ಸಮಿತಿ ಸಭೆಯಲ್ಲಿ ಚರ್ಚಿಸಲಾಯಿತು.**

1. ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಪಿಟಿಷನ್ ನಂ.10096/2020 (GIM-PIL) ರ ನಿರ್ದೇಶನದಲ್ಲಿ ತಿಳಿಸಿರುವಂತೆ ಪಾಲಿಕೆಯ ವ್ಯಾಪ್ತಿಯಲ್ಲಿ Begging and Hawking Children identification survey ಕೈಗೊಳ್ಳುವ ಸಂಬಂಧ
2. ಮಾನ್ಯ ಉಚ್ಛ ನ್ಯಾಯಾಲಯದ ರಿಟ್ ಪಿಟಿಷನ್ ನಂ.15768/2013 ಲ್ಲಿ ಹಿನ್ನೆಲೆಯಲ್ಲಿ ಹೊರಡಿಸಲಾದ ಸರ್ಕಾರದ ಆದೇಶದಲ್ಲಿ 2020-21ನೇ ಸಾಲಿನಲ್ಲಿ ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಗುರುತಿಸಿ, ಶಾಲೆಗೆ ಹಾಜರಾಗುವಂತೆ ಕ್ರಮವಹಿಸುವ ಬಗ್ಗೆ.
3. ವಾರ್ಡ್ ವ್ಯಾಪ್ತಿ ಪ್ರದೇಶದಲ್ಲಿ ರಾತ್ರಿಹೊತ್ತು ಬೀದಿ ಬದಿ ಮಲಗುವವರ, ನಿರಾಶ್ರಿತರ ಸಂಖ್ಯೆಯನ್ನು ಕಲೆಹಾಕಲು ಅಗತ್ಯ ಕ್ರಮವಹಿಸುವ ಬಗ್ಗೆ.

ಕೊನೆಯದಾಗಿ ಕಾರ್ಯದರ್ಶಿಯವರು ಸಭೆಗೆ ಆಗಮಿಸಿದ್ದ ಮಾನ್ಯ ಶಾಸಕರಿಗೆ, ಅಧಿಕಾರಿಗಳಿಗೆ ಮತ್ತು ಸಮಿತಿಯ ಸದಸ್ಯರುಗಳಿಗೆ ಹಾಗೂ ಸಾರ್ವಜನಿಕರಿಗೆ ವಂದಿಸಿ ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳ ಅಪ್ಪಣೆಯ ಮೇರೆಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

21/12/2020

**ಕಾರ್ಯದರ್ಶಿ ಮತ್ತು ಸಹಾಯಕ ಅಭಿಯಂತರರು**
**ವಾರ್ಡ್ ಸಂಖ್ಯೆ: 115 ವನ್ನಾರಪೇಟೆ**
**ಬಿ.ಬಿ.ಎಂ.ಪಿ**

**ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು**
**ವಾರ್ಡ್ ಸಂಖ್ಯೆ: 115 ವನ್ನಾರಪೇಟೆ**

<u>ಪ್ರತಿಯನ್ನು:</u>

1. ಮಾನ್ಯ ಆಡಳಿತಗಾರರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
2. ಮಾನ್ಯ ಆಯುಕ್ತರು, ಬಿಬಿಎಂಪಿ ರವರ ಅವಗಾಹನೆಗೆ ತರಲು ಆಪ್ತ ಶಾಖೆಗೆ ಸಲ್ಲಿಸಿದೆ.
3. ವಿಶೇಷ ಆಯುಕ್ತರು (ಆಡಳಿತ) ರವರ ಅವಗಾಹನೆಗೆ ಸಲ್ಲಿಸಿದೆ.
4. ವಿಶೇಷ ಆಯುಕ್ತರು (ಆರೋಗ್ಯ & ಘ.ತ್ಯಾ.ನಿ) ರವರ ಅವಗಾಹನೆಗಾಗಿ ಸಲ್ಲಿಸಿದೆ.
5. ಜಂಟಿ ಆಯುಕ್ತರು (ಪೂರ್ವ) ರವರ ಅವಗಾಹನೆಗೆ ಸಲ್ಲಿಸಿದೆ.
6. ಮಾನ್ಯ ಮುಖ್ಯ ಅಭಿಯಂತರರು (ಪೂರ್ವ) ರವರ ಅಮೂಲ್ಯ ಅವಗಾಹನೆಗಾಗಿ ಸಲ್ಲಿಸಿದೆ.
7. ವಾರ್ಡ್ ಸಮಿತಿಯ ಸದಸ್ಯರುಗಳ ಮಾಹಿತಿಗಾಗಿ ಕಳುಹಿಸಿದೆ.
8. ಕಛೇರಿ ಪ್ರತಿ.